
ತೊಡಗಿದೆ. ನನ್ನ ಸಂಕಟವೇ ಇವನ ಸಂಕಟ, ನನಗಾಗ ದುದು ಇವನಿಗೂ ಆಗಬಾರದು ಎಂದೆನಿಸಿ ಇವನನ್ನು ಈ ದುಃಸ್ಥಿತಿಯಿಂದ ತಪ್ಪಿಸಲು ಓಡಿ ಬಂದೆ.'

ಅವನ ಪ್ರಾಮಾಣಿಕತೆಯಿಂದಾಗಿ ಇಬ್ಬರಿಗೂ ಬಿಡುಗಡೆ ಆಯಿತು.

ನ ತತ್ ಪರಸ್ಯ ಸಂದದ್ಯಾತ್
ಪ್ರತಿಕೂಲಂ ಯದಾತ್ಮನಃ |
ಏತದ್ಧರ್ಮಮಿತಿ ಪ್ರೋಕ್ತಂ
ಕಾಮಾದನ್ಯತ್ ಪ್ರವರ್ತತೇ ||

'ತನಗೆ ಪ್ರತಿಕೂಲವಾದುದನ್ನು ಇತರರಿಗೆ ಉಂಟಾಗುವಂತೆ ಮಾಡಬಾರದು; ಇದೇ ಧರ್ಮ. ಉಳಿದುದೆಲ್ಲವೂ ಆಸೆಯಿಂದ ಹುಟ್ಟುವಂತಹದು'– ಎಂಬ ನೀತಿ ಈ ಕಥೆಯಿಂದ ತಿಳಿದುಬರುತ್ತದೆ.

# ಮೃದುವಚನ



ಕಲೆ: ರಾಮೆಗೌತಮ

ಒಬ್ಬ ಭಿಕ್ಷುಕ ಒಂದು ಮನೆಗೆ ಭಿಕ್ಷೆ ಬೇಡಲು ಹೋದ. ಅವನು ತುಂಬ ಹಸಿದಿದ್ದ. ಬಳಲಿಕೆ ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು. ಮಾನಸಿಕವಾಗಿಯೂ ತುಂಬ ನೊಂದಿದ್ದ. ಮನೆಯ ಯಜಮಾನ ಹೊರಗೆ ಬಂದವನೆ ಭಿಕ್ಷುಕನನ್ನು ಚೆನ್ನಾಗಿ ಬೈದು ಓಡಿಸಿದನು. ಮೊದಲೇ ಬಳಲಿದ್ದ ಮತ್ತು ನೊಂದಿದ್ದ ಅವನಿಗೆ ತಡೆಯಲಾರದ ವೇದನೆ ಉಂಟಾಯಿತು.

ಅವನು ಸ್ವಲ್ಪ ಮುಂದೆ ಹೋಗಿ ನಡೆಯಲಾಗದೆ ಒಂದು ಮರದಡಿ ಮಲಗಿದನು. ಅವನನ್ನು ನಿದ್ರೆ ಆವರಿಸಿತು. ಅಷ್ಟರಲ್ಲಿಯೆ ಅವನನ್ನು ಯಾರೋ ಮೃದುವಾಗಿ ತಟ್ಟಿ ಕರೆದರು. ಅವನು ಕಣ್ತೆರದು ನೋಡಿದಾಗ ಒಂದು ಚಿಕ್ಕ ಹುಡುಗಿ ನಿಂತುಕೊಂಡಿದ್ದಳು. ಭಿಕ್ಷುಕ ಆಶ್ಚರ್ಯದಿಂದ ಆಕೆಯನ್ನು ನೋಡಿದ. ತಾನು ಈ ಹಿಂದೆ ಭಿಕ್ಷೆ ಬೇಡಿದ ಮನೆಯಲ್ಲಿ ಅವಳು ನಿಂತಿದ್ದನ್ನು ಆತ ಕಂಡಿದ್ದ. ಮನೆಯ ಯಜಮಾನ ಇವನನ್ನು ಬೈದು ಓಡಿಸಿದಾಗ ಆಕೆಗೆ ತುಂಬ ನೋವಾದುದನ್ನು ಇವನು ಗಮನಿಸಿದ್ದ.

ಆಕೆಯ ವಾತ್ಸಲ್ಯಪೂರ್ಣ ಧ್ವನಿ, ಮೃದುವಚನ ಭಿಕ್ಷುಕನ ನೋವನ್ನು ನಿವಾರಿಸಿತು. ಬಳಲಿಕೆ ಕಡಿಮೆಯಾಯಿತು. ಆಕೆ ತನ್ನ ಪುಟ್ಟ ಕೈಗಳಿಂದ ನೀಡಿದ ತಿಂಡಿಯನ್ನು ತಿಂದನು. ಅದು ಅವನ ದೇಹ ಮನಸ್ಸುಗಳೆರಡಕ್ಕೂ ಶಕ್ತಿಯನ್ನೂ ಪುಷ್ಟಿಯನ್ನೂ ನೀಡಿತು.

ಆ ಹುಡುಗಿಯೇ ಭಿಕ್ಷುಕನನ್ನು ಬೈದು ಓಡಿಸಿದ ಯಜಮಾನನ ಮಗಳು. ಭಿಕ್ಷುಕನ ಸ್ಥಿತಿಗೆ ಮರುಗಿ ತಂದೆಗೆ ತಿಳಿಯದಂತೆ ತಿಂಡಿಯನ್ನು ತಂದು ಭಿಕ್ಷುಕನಿಗೆ ಉಣಿಸಿದಳು. ಆ ತಿಂಡಿಗಿಂತ ಹೆಚ್ಚಾಗಿ ಅವಳ ಸ್ನೇಹಪೂರ್ಣ ಮೃದುನುಡಿ ಅವನಿಗೆ ಶಾಂತಿ ಸಮಾಧಾನವನ್ನು ನೀಡಿತು.

ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ:

ಪ್ರಿಯವಾಕ್ಯಪ್ರದಾನೇನ ಸರ್ವೇ ತುಷ್ಯಂತಿ ಜಂತವಃ|
ತಸ್ಮಾದೇವ ಪ್ರವಕ್ತವ್ಯಂ ವಚನೇ ಕಾ ದರಿದ್ರತಾ ||

'ಪ್ರಿಯವಾದ ಮಾತುಗಳಿಂದ ಎಲ್ಲ ಜಂತುಗಳು ಸಂತುಷ್ಟಗೊಳ್ಳುತ್ತವೆ. ಆದ್ದರಿಂದ ಪ್ರಿಯವಾಕ್ಯವನ್ನೆ ನುಡಿಯಬೇಕು. ಮಾತಿಗೂ ಬಡತನವೇ?'